ಹಾಡಿ ನಲಿಯೋಣ

(ಮಕ್ಕಳ ಗೀತೆಗಳು)



ರತ ಜ್ಞಾನ ವಿಜ್ಞಾನ ಸಮಿತಿ

Haadi naliyona a book collection of songs related to literacy, science and primary education, written by different Authors.

First edition: September 2001

Copies: 5000

Pages: 24+4

Rate: 6.00

Published by:
E.Basavaraju,
Secretary
nataka

ಮುನ್ನುಡಿ

ಗೆಳೆಯರೆ,

ಭಾರತ ಜ್ಞಾನ ವಿಜ್ಞಾನ ಸಮಿತಿ ಈ ವರ್ಷ ಜ್ಞಾನ ವಿಜ್ಞಾನ ಓದುಗರ ಬಳಗ ಎಂಬ ಯೋಜನೆಯಡಿಯಲ್ಲಿ ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಮಕ್ಕಳಿಗಾಗಿ ಪವಾಡಗಳು, ನಮ್ಮ ಚಂದ್ರ, ಹಾಡಿ ನಲಿಯೋಣ, ಹಿರೋಷಿಮಾದ ಮಕ್ಕಳು ಹಾಗೂ ನಮ್ಮ ಆರೋಗ್ಯ ಎಂಬ ಐದು ಪುಸ್ತಕಗಳನ್ನು ಹೊರತರುತ್ತಿದೆ. ಉತ್ತಮವಾದ ಪುಸ್ತಕಗಳನ್ನು ಕಡಿಮೆ ಬೆಲೆಯಲ್ಲಿ ದೊರಕಿಸಿಕೊಡುವ ಉದ್ದೇಶದಿಂದ ಈ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಈ ಪುಸ್ತಕಗಳು ನಿಮಗೆ ಇಷ್ಟವಾಗುತ್ತವೆಂದು ನಾವು ನಂಬಿದ್ದೇವೆ. ಈ ಪುಸ್ತಕಗಳ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಬರೆದು ಕಳಿಸಿ. ಅದರಿಂದ ಮುಂದೆ ನಿಮಗಾಗಿ ನಾವು ತರಲಿರುವ ಪುಸ್ತಕಗಳನ್ನು ಇನ್ನೂ ಉತ್ತಮಪಡಿಸಲು ಸಹಾಯವಾಗುತ್ತದೆ.

ಹಾಡಿ ನಲಿಯೋಣ ಪುಸ್ತಕ ಕಳೆದ ಅನೇಕ ವರ್ಷಗಳಿಂದ ಬಿಜಿವಿಎಸ್ ಕಾರ್ಯಕ್ರಮದಲ್ಲಿ ಹಾಡಲ್ಪಟ್ಟು ಜನಪ್ರಿಯವಾಗಿರುವ ಹಾಡುಗಳನ್ನು ಒಳಗೊಂಡಿದೆ. ಇವು ಮಕ್ಕಳು ವಿವಿಧ ಸಂದರ್ಭದಲ್ಲಿ ಹಾಡಲು ಹಾಗೂ ಹಿನ್ನೆಲೆ ಅರ್ಥ ಮಾಡಿಕೊಳ್ಳಲು ಸಹಾಯಕವಾಗಲಿದೆ. ಈ ಹಾಡುಗಳನ್ನು ರಚಿಸಿರುವ ಎಲ್ಲ ಕವಿಗಳಿಗೆ, ಅಂದವಾದ ಮುಖಪುಟ ರಚಿಸಿಕೊಟ್ಟ ಶ್ರೀ ಗುಜ್ಜಾರಪ್ಪನವರಿಗೆ, ಡಿ.ಟಿ.ಪಿ ಮಾಡಿದ ಬಿಜಿವಿಎಸ್ ರಾಜ್ಯ ಕಛೇರಿಯ ಕುಮಾರಿ ಸಿ.ಹೇಮಾವತಿಯವರಿಗೆ, ಒಳ ಪುಟ ವಿನ್ಯಾಸ ಮಾಡಿದ ಗೆಳೆಯ ಶ್ರೀ ರಾಜಶೇಖರ್‌ರವರಿಗೆ, ಪುಸ್ತಕವನ್ನು ಹೊರತರಲು ಶ್ರಮಿಸಿದ ಶ್ರೀಎಫ್.ಸಿ.ಚೇಗರೆಡ್ಡಿ ಅವರಿಗೆ ಹಾಗೂ ಕಡಿಮೆ ಸಮಯದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಅಕ್ಷರವಿನ್ಯಾಸದ ಗೆಳೆಯ ಚಂದ್ರು ಇವರುಗಳಿಗೆನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಯೋಜನೆ ಪ್ರಾರಂಭಿಸಿದಾಗ ಪ್ರಕಟಣಾಪೂರ್ವ ಕೂಪನ್ ಗಳನ್ನು ಮಾರಾಟ ಮಾಡಿ ಪುಸ್ತಕ ಪ್ರಕಟಣೆಯ ಸಾಹಸಕ್ಕಿಳಿಯಲು ನೆರವಾದ ನೂರಾರು ಗೆಳೆಯರಿಗೆ ನಮ್ಮ ವಿಶೇಷ ನಮನಗಳು. ಈ ಪುಸ್ತಕ ಕರ್ನಾಟಕದ ಮನೆ ಮನೆಗೆ ತಲುಪಿ ಮಕ್ಕಳು, ನವಸಾಕ್ಷರರು ಹಾಗೂ ಇತರ ಆಸಕ್ತರು ನಾಡಿನೆಲ್ಲೆಡೆ ಈ ಗೀತೆಗಳನ್ನು ಹಾಡುವಂತಾಗಲಿ ಎಂದು ಹಾರೈಸುತ್ತೇವೆ.

ಕಾರ್ಯದರ್ಶಿ

ಭಾರತ ಜ್ಞಾನ ವಿಜ್ಞಾನ ಸಮಿತಿ

ಪರಿವಿಡಿ

1. ಮಾನವರಾಗೋಣ




ಮಾನವರಾಗೋಣ ಬನ್ನಿ ಮಾನವರಾಗೋಣ
ಮಾನವರಾಗೋಣ ನಾವು ಮಾನವರಾಗೋಣ //ಪ//

ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ
ಹಿಂದು ಮುಸಲ್ಮಾನ್ ಪಾರಸಿ ಕ್ರೈಸ್ತ
ಎಲ್ಲವೂ ಆಗಿ ಒಡಕಿಗೆ ಸಾಗಿ
ಬದುಕಿಯು ಸತ್ತು ಇರುವುದು ಸಾಕು //ಪ//

ಅಡ್ಡಗೋಡೆಯನ್ನೊಡೆಯುತ್ತ ನಡೆದು
ಶೋಷಣೆ ಬೇರನು ಕಿತ್ತು ಎಸೆದು
ಸೋದರರೆಲ್ಲರೂ ಒಟ್ಟಾಗಿ ಕೂಡುತ್ತ
ಸವಿಯನ್ನೆಲ್ಲ ಸವಿಯೋಣ ಬನ್ನಿ //ಪ//

ಎಲ್ಲರಿಗಿರಲಿ ನಿಲ್ಲಲು ನೆರಳು
ಎಲ್ಲ ಮಕ್ಕಳಿಗೂ ಕುಡಿಯಲು ಹಾಲು
ಹಾಸಲು ಹೊದೆಯಲು ಇರಲಿ ಬಟ್ಟೆ
ನೆಮ್ಮದಿ ಉಕ್ಕಲಿ ಎಲ್ಲರಿಗೆಂದೂ //ಪ//

ಭೇದವನರಿಯದು ನೀಲಿಯ ಗಗನ
ಒಂದೇ ಮಣ್ಣಿಂದೆಲ್ಲರ ಜನನ
ಒಂದೇ ದಿಕ್ಕಿನಲೆಲ್ಲರ ಪಯಣ
ನುಡಿಯಲಿ ಮಿಡಿಯಲಿ ಅಂತಃಕರಣ //ಪ//



ಜ.ಹೊ. ನಾರಾಯಣಸ್ವಾಮಿ

2. ಜ್ಞಾನ ದೀಪ ಹಿಡಿದು ಬನ್ನಿ

ಜ್ಞಾನ ದೀಪ ಹಿಡಿದು ಬನ್ನಿ
ಕ್ರಾಂತಿ ಕಹಳೆ ಮೊಳಗಿದೆ //ಪ//

ಹೊಂಬೆಳಕಿನ ಕಿರಣಗಳು ಸಾಗಿಸಾಗಿ ಹೊರಟಿವೆ
ಕೋಟಿ ಕಂಠ ಕೂಗಿ ಹೇಳಿವೆ
ಜ್ಞಾನ ವಿಜ್ಞಾನ ಜಿಂದಾಬಾದ್
ಜ್ಞಾನ ವಿಜ್ಞಾನ ಜಿಂದಾಬಾದ್ //ಪ//

ಸಾವಿರಾರು ವರ್ಷಗಳ ಹಿಂದೆಯೆ ಶುರುವಾಗಿದೆ
ತ್ಯಾಗ ಬಲಿದಾನಗಳ ನೆನಪು ನಮ್ಮ ಕಾಡಿದೆ
ಅಂಜದೆಯೆ, ಅಳುಕದೆಯೆ ಸಾಗಿ ಮುಂದೆ ಬನ್ನಿರಿ
ಭೂಮಿಯಿಂದ ಮುಗಿಲಿಗೆ ಕೂಗಿ ಕೂಗಿ ಹೇಳಿರಿ
ಕೋಟಿ ಕಂಠ ಕೂಗಿ ಹೇಳಿವೆ
ಜ್ಞಾನ ವಿಜ್ಞಾನ ಜಿಂದಾಬಾದ್ //ಪ//

ನಮ್ಮ ಜೊತೆ ಇರುವುದಿಂದು ಅಣು ಅಣುವಿನ ಶಕ್ತಿಯು
ರಾಕೇಟಿನ ಶಕ್ತಿಯ ನವ ಯುವಕರ ಸೇನೆಯು
ಸೋಲು ಎಂಬ ಮಾತೆ ಇಲ್ಲ, ಮುನ್ನುಗ್ಗುತ ಸಾಗಿರಿ
ಅಜ್ಞಾನವ ಅಳಿಸುತ ವಿಜ್ಞಾನವ ತಿಳಿಸಿರಿ
ಕೋಟಿ ಕಂಠ ಕೂಗಿ ಹೇಳಿವೆ
ಜ್ಞಾನ ವಿಜ್ಞಾನ ಜಿಂದಾಬಾದ್ //ಪ//

ಮನುಷ್ಯ ಮನುಷ್ಯರ ನಡುವೆ ಈ ಭೇದ ಏತಕೆ
ಮೇಲು ಕೀಳು ತೊರೆಯುತ ಎಲ್ಲ ಒಂದುಗೂಡಿರಿ
ಎಲ್ಲ ಹಳೆ ಪುರಾಣದ ಬಂಧನ ಕಿತ್ತೆಸೆಯುತ
ಜ್ಞಾನವನ್ನು ಅರಿಯುವ ವಿಜ್ಞಾನವನ್ನು ಬೆಳಸಿರಿ
ಕೋಟಿ ಕಂಠ ಕೂಗಿ ಹೇಳಿವೆ
ಜ್ಞಾನ ವಿಜ್ಞಾನ ಜಿಂದಾಬಾದ್ //ಪ//

3. ವರ್ಷಾವು ಕಳೆದಾವ್ರೋ

ವರ್ಷಾವು ಕಳೆದಾವ್ರೋ ವಿಜ್ಞಾನ ಬೆಳೆದಾದೋ
ಅಣ್ಣಯ್ಯ ನಮ್ಮ ಬಾಳಲ್ಲಿ ಮಾತ್ರ ಬೆಳಕೆ ಕಾಣದಲ್ಲೊ //ಪ//

ಒಂದು ಕ್ಷಣಕಾಲ ನಿನ್ನ ಬುದ್ಧೀಯ ಕೆಣಕಯ್ಯಾ
ಅಕ್ಷರ ಬೀಜವ ಬಿತ್ತಾದೆ ನಮಗೆ ಫಲವೆ ಸಿಗದಯ್ಯಾ //ಪ//

ನೂರಾರು ವರ್ಷಗಳ ದುಗುಡಾವ ಅಳಿಸಲು
ಅಣ್ಣಯ್ಯ ನಮ್ಮ ಅಜ್ಞಾನ ತೊಲಗಲು ಅಕ್ಷರ ಬೇಕಯ್ಯ//ಪ//

ವಯಸಾದರೇನಂತೆ ವಿದ್ಯೆಗೆ ವಯಸಿಲ್ಲ
ಸ್ಫೂರ್ತಿಯಿಂದಲೇ ಮನಸನ್ನು ಮಾಡಯ್ಯ
ಅರಿವಿನ ದೀಪವ ಹಚ್ಚಯ್ಯ

– *ಸಮೂಹ ಸೃಷ್ಠಿ*



4. ಅಮೃತವಾಣಿ

ಕುಹು ಕುಹು ನೀ ಕೋಗಿಲೆಯೆ
ನಾ ಹಾಡುವ ಹಾಡೊಂದ ಹಾಡುವೆಯ
ನಾ ಹೇಳುವ ಮಾತೊಂದ ಕೇಳುವೆಯಾ //ಪ//

ಚಿಗುರಿದ ಬನದಲಿ ನೀನಿರುವೆ
ನೀ ಕೂಗುವ ಧ್ವನಿಯಲಿ ನಾನಿರುವೆ
ಹಾಡುತ ಕುಳಿತರೆ ದಿನವೆಲ್ಲಾ
ನಾ ನೋಡುತಲಿರುವೆ ವನವೆಲ್ಲಾ //ಪ//


ಭಾರತ ದೇಶದ ಬಾನಿನೊಳು
ಈ ಧ್ವನಿಗಳ ಮಾರ್ದನಿಗೊಳಿಸುವೆಯಾ
ಭಾವೈಕ್ಯತೆಯನು ಮೂಡಿಸಲು
ಈ ಅಸಮಾನತೆಯನು ಅಳಿಸುವೆಯಾ //ಪ//

ಭೇದ ಭಾವವ ಮರೆಸುವೆಯಾ
ನೀ ರಾಷ್ಟ್ರಭಿಮಾನವ ತುಂಬುವೆಯಾ
ಅಂಧಕಾರದಾ ಜನಗಳಿಗೆ
ನೀ ಅಮೃತವಾಣಿಯ ತಿಳಿಸುವೆಯಾ //ಪ//



– ಕುವೆಂಪು

5. ಸಾಗರದ ನೀರು



ಸಾಗರದ ನೀರು ಕಾದು ಆವಿಯಾಗಿ
ಮೇಲೆ ತಂಪಾಗಿ ಚಲಿಸುವುದು ಮೋಡವಾಗಿ //ಪ//
ಭಾರವಾಗಿ ಬೀಳುವುದು ಮಳೆಯಾಗಿ
ಮತ್ತೆ ಸಾಗರವ ಸೇರುವುದು ನದಿಯಾಗಿ //ಪ//

ಮೋಡದ ಹನಿ ಮೂಲಕ ಸೂರ್ಯನ ಕಿರಣ
ಆಗುವುದು ಅದರಲಿ ವಕ್ರೀಭವನ
ವರ್ಣ ವಿಭಜನೆ ಹೊಂದಿ ಏಳು ಬಣ್ಣ
ಕಾಮನ ಬಿಲ್ಲಾಗಿ ಕಾಣುವುದಣ್ಣ //ಪ//

ಹಿಂಗಾರು ಮುಂಗಾರು ಮಾರುತಗಳು
ಮೋಡಗಳ ಎಳೆದು ತಂದು ಮಳೆಯು ಬಂದು
ಬೆಳೆಗಳು ಬೆಳೆಯುವವು ಹುಲುಸಾಗಿ
ನಮ್ಮ ರೈತರ ಜೀವನ ಹರುಷವಾಗಿ //ಪ//

ಭಾರತದ ಬೇಸಾಯಕೆ ಮಳೆಗಾಲ
ಅದು ಬಾರದಿದ್ದರೆ ಬರುವುದು ಬರಗಾಲ
ಮಳೆಯನೆ ನಂಬಿದ ನಮ್ಮ ರೈತ
ಬೆಳೆಯಿಲ್ಲದೆ ಬಡವನಾದ ಅನ್ನದಾತ //ಪ//

– *ಜಿ.ಹನುಮಂತರಾಯ*



6. ಅಮ್ಮ ಅಮ್ಮ ಅಮ್ಮ..

ಅಮ್ಮ ಅಮ್ಮ ಅಮ್ಮ ನಮ್ಮ ತೋಳಿಗೆ ರೆಕ್ಕೆ ಹಚ್ಚು
ಸೊಂಟಕೆ ಬೆಳ್ಳಿ ಪಟ್ಟಿ ಕಟ್ಟಿ ಹಕ್ಕಿ ಪುಚ್ಚ ಚುಚ್ಚು //ಪ//


ಹಾರುತ್ತೇವೆ ರೆಕ್ಕೆ ಬಿಚ್ಚಿ ತೆಂಗಿನ ಮರಕೂ ಮೇಲೆ
ಜಗಲಿ ಮೇಲೆ ನಿಂತೇ ನಮಗೆ ಅಮ್ಮ ಟಾಟಾ ಹೇಳೆ //ಪ//

ಹಾಗೆ ಹಾಗೆ ಮೇಲೆ ಹೋಗಿ ಮುಟ್ಟುತ್ತೇವೆ ಮೋಡ
ಕೇಳುತ್ತೇವೆ ಯಾರೂ ಕೇಳದ ಚುಕ್ಕಿ ಹಾಡೋ ಹಾಡ //ಪ//

ತಿಂಗಳೂರಿನ ಅಂಗಳ ಸೇರಿ ಬೆಳ್ಳಿ ಮೊಲವನು ನೋಡಿ
ಹಿಡಿಯುತ್ತೇವೆ ಹಾರೋ ಬಣ್ಣದ ಜಿಂಕೆಯ ಹೇಗೋ ಮಾಡಿ//ಪ//

ಕೋಟ್ಟೇ ಕೊಡುವನು ಚಂದ ಮಾಮ ಕೆನ್ನೆ ತುಂಬ ಮುತ್ತು
ಮುದ್ದಿಸಿ ಬೆಟ್ಟದ ತುದಿಗೆ ಇಳಿಸುವನು ಯಾರೂ ಇಲ್ಲದ ಹೊತ್ತು //ಪ//

– ಡಾ.ಹೆಚ್.ಎಸ್.ವೆಂಕಟೇಶ ಮೂರ್ತಿ



7. ಏಕೆಂದು ಏಕೆಂದು

(ಮಕ್ಕಳ ಜೊತೆಗೂಡಿ ಹಾಡಿದಲ್ಲಿ ಮತ್ತು ಸಭಿಕರನ್ನೆಲ್ಲ ಪಲ್ಲವಿ ಹಾಡಲು ಪ್ರೋತ್ಸಾಹಿಸಿದರೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ)

ಏಕೆಂದು ಏಕೆಂದು
ಏಕೆಂದು ಏಕೆಂದು ಏಕೆ ಎಂದು //ಪ//
ಬಾನಲ್ಲಿ ಕಾಮನ ಬಿಲ್ಲು ಏಕೆಂದು
ನಕ್ಷತ್ರ ಮಿನುಗೋದು ಏಕೆಂದು //ಪ//

ತುಂಬೆ ಹೂ ಬಿಳುಪು ಏಕೆಂದು
ಗುಲಾಬಿ ಹೂ ಕೆಂಪು ಏಕೆಂದು
ಮಿಣುಕು ಹುಳುವಿನ ಹಿಂದೆ ಮಿಣ ಮಿಣನೆ
ಮಿಣಗೋದು ಏಕೆಂದು //ಪ//


ಕಾಗೆಯು ಗೂಬೆಯು ಬಾನಲ್ಲಿ ಹಾರ್ದಂಗೆ
ಬೆಕ್ಕದು ಹಾರೋಲ್ಲ ಏಕೆಂದು
ಪಾರಿವಾಳ ಇಣಚಿ ಒಂದಾಗಿ ನಕ್ಕಂಗೆ
ಕೆಂಪಾದ ದಾಳಿಂಬೆ ಕೈ ತಟ್ಟಿ ನಗೋಲ್ಲ ಏಕೆಂದು //ಪ//

ಮಾರಣ್ಣ ಬೋರಣ್ಣ ಅವರಮ್ಮ
ಇವನ ತಂಗಿ ಭಿಕ್ಷೆ ಬೇಡ್ತಿದ್ದಾರೆ ಏಕೆಂದು
ಅನ್ನ ಔಷಧಿ ಪಡೆಯುವ ದುಡ್ನಲ್ಲಿ
ಬಾಂಬನ್ನು ಮಾಡ್ತಿದ್ದಾರೆ ಏಕೆಂದು //ಪ//


ಜಾತಿ ಮತದ ಬಲೆಯಲ್ಲಿ ಸಿಕ್ಕೊಂಡು
ನಾವೆಲ್ಲ ಸಾಯ್ತಿದ್ದೀವಿ ಏಕೆಂದು
ಅನ್ನದ ಕೂಗು ಏಕೆಂದು
ಬಡತನ ಇರುವುದು ಏಕೆಂದು
ಅಜ್ಞಾನ ಇರುವುದು ಏಕೆಂದು

ಕೇಳುವ ಕಾಲ ಬಂದಿದೆ ಈಗ
ಎಲ್ಲೆಲ್ಲಿ ಅನ್ಯಾಯ ಹೆಚ್ಚಾಗಿ ನಡೆದಿದೆ
ಅಲ್ಲಲ್ಲಿ ಭಯಪಡದೆ ತಲೆ ಎತ್ತಿ ಎದೆ ಎತ್ತಿ
ಏಕೆಂದು ಏಕೆಂದು ಏಕೆಂದು
ಕೇಳುವ ಕಾಲ ಬಂದಿವೆ ಈಗ //ಪ//

– ಸಮೂಹ ಸೃಷ್ಠಿ



8. ವಂದನೆ ಗೀತೆ



ಹೋಗಿ ಬರುವೆವು ನಮಸ್ಕಾರ
ಚಿಣ್ಣರ ಮೇಳಕೆ ಜಯಕಾರ
ಬೇಕು ನಿಮ್ಮಯ ಸಹಕಾರ
ಸೇರೋಣ ನಾವೆಲ್ಲ ಮುಂದಿನ ವಾರ //ಪ//

ಶಿಕ್ಷಣಾರ್ಥಿಗಳೆ ಗಣ್ಯರೆ ಚಿಣ್ಣರೆ
ಎಲ್ಲ ಬಂಧುಗಳಿಗೆ ವಂದನೆ
ಇಷ್ಟು ದಿನವು ಜೊತೆಯಲ್ಲಿ ಕಲೆತು
ಸೇರಿದ ನಿಮಗೆಲ್ಲ ನಮಸ್ಕಾರ //ಪ//

ಇಂದಿನ ದಿನವನು ಇಂದೇ ಮರೆಯದೆ
ಮುಂದಿನ ದಿನ ನಾವು ಸೇರೋಣ
ಸೇರಿದ ದಿನದಿ ಇಂದಿನ ದಿನವನು
ಸ್ಮರಿಸುತ ಸವಿ ನುಡಿ ನುಡಿಯೋಣ //ಪ//

– ಕೆ.ರಾಮಯ್ಯ

9. ಆಗಬಹುದು ನಾನೊಂದು.............

ಬಾನಲ್ಲಿ ಬೆಳಗುವ ಭಾಸ್ಕರನು ನಾನಾಗದಿರಬಹುದು
ಕಾರ್ಮೋಡದಂಚಿನ ಸುಳಿಗಾಳಿ ನಾನಾಗದಿರಬಹುದು
ಆಗಬಹುದು ನಾನೊಂದು ಇರುಳಲಿ ಮಿಂಚುವ ಮಿಂಚುಹುಳು
ಆಗಬಹುದು ನಾನೊಂದು ಬದುಕನು ಮೆಲ್ಲುವ ಮೆಲ್ಲುಸಿರು //ಪ//

ಕಾನನದೊಳಗಿನ ಮುಗಿಲನು ಮುಟ್ಟುವ ವೃಕ್ಷದ ನೆರಳು ನಾನಲ್ಲ
ಬಾನಿನ ಎಲ್ಲೆಯ ಮೀರುತ ಹಾರುವ ಗರುಡನ ಗುರುತು ನನಗಿಲ್ಲ
ಆಗಬಹುದು ನಾನೊಂದು ಕುರುಚಲು ಗಿಡದ ತರಗೆಲೆಯು
ಆಗಬಹುದು ನಾನೊಂದು ಗಾಳಿಗೆ ತೇಲುವ ರೆಕ್ಕೆ ಹುಳು //ಪ//

ಕಡಲಿನ ಅಲೆಗಳ ಉಕ್ಕುವ ತೆರೆಗಳ ಅಂಚಿನ ಶಕ್ತಿಯು ನಾನಲ್ಲ
ಮೋಡದ ಮರೆಯಲಿ ಮಿಂಚುವ ಗುಡುಗುವ ಸಿಡಿಲಿನ ಮರಿಯು ನಾನಲ್ಲ
ಆಗುವೆನೊಂದು ಮಳೆಯ ಹನಿ ಸಹಜತೆ ಬಯಸುವ ಪುಟ್ಟದನಿ
ಆಗುವೆನೊಂದು ಮಣ್ಣು ಕಣ ನಾಳೆಯ ಕಟ್ಟುವ ಅದುವೆಕಣ //ಪ//

– ಸಂಗ ಹ



10. ಯಾತಕೋ ತಮ್ಮ ಅಜ್ಞಾನ



ಯಾತಕೋ ತಮ್ಮ ಅಜ್ಞಾನ
ತಿಳಿಯಿರಿ ಎಲ್ಲಾ ವಿಜ್ಞಾನ
ಮೂಢನಂಬಿಕೆ ಭೋದಿಸಿ ಕೆಲವರು
ಹಾಕ್ವರು ನಿನಗೆ ಕಡಿವಾಣ //ಪ//

ದೇವಸ್ಥಾನದಿ ನೋಡಿ ಪೂಜಾರಿಯೇ
ದೇವರ ದಲ್ಲಾಳಿಯಣ್ಣ
ಕಷ್ಟ ನಷ್ಟ ಎಲ್ಲಾ ಹರಿಸುವ ದೇವರಿಗೆ
ಲಂಚವನ್ನೇಕೆ ಒಡ್ಡುವಿರಣ್ಣ //ಪ//

ಗ್ರಹಗತಿ ಕೆಟ್ಟಿದೆ ಎನ್ನುವರು
ನವಗ್ರಹ ಪೂಜೆಯ ಮಾಡುವರು
ಗ್ರಹ ಪೂಜೆಯ ಮಾಡಿಯೂ ಗ್ರಹಚಾರ ಕೆಟ್ಟರೆ
ಅಯ್ಯೋ ಹಣೇಬರಹ ಎನ್ನುವರು

ಮದುವೆಯಾಗಲು ಮುಹೂರ್ತಬೇಕು
ಮಕ್ಕಳಾದರೂ ಜಾತಕ ಬೇಕು
ಹೊಟ್ಟೆಗಿಲ್ಲದೆ ನರಳುವಾಗ
ಜಾತಕ ಜ್ಯೋತಿಷ್ಯ ಯಾತಕೆ ಬೇಕು.

– ಗ್ಯಾರಂಟಿ ರಾಮಣ್ಣ

11. ಕಾಡ ಬೆಳಸಿರಣ್ಣ

ಕಾಡ ಬೆಳಸಿರಣ್ಣ ನೀವು ನಾಡ ಉಳಿಸಿರಣ್ಣ
ಕಾಲುವೆ ತೊರೆಗಳು ತುಂಬಿ ಹರಿಯಲು
ಮರಗಿಡ ಬೇಕಣ್ಣಾ //ಪ//

ಸತ್ಯ ತಿಳಿಯಿರಣ್ಣಾ ಇದನ್ನು ನಿತ್ಯ ನೆನೆಯಿರಣ್ಣಾ
ವಿಜ್ಞಾನ ಜ್ಞಾನವ ದೇಶಕ್ಕೆ ಹರಡಲು
ಮುಂದೆ ಬನ್ನಿರಣ್ಣ //ಪ//

ಬರಗಾಲ ತಡೆಯಣ್ಣಾ ಅದಕೆ ಪರಿಸರ ಬೇಕಣ್ಣಾ
ಮಣ್ಣಿನ ಸವಕಳಿ ತಪ್ಪಿಸಲು
ನೀ ಜಾಗೃತಿಯಾಗಣ್ಣಾ //ಪ//

ಪ್ರಾಣಿ ಪಕ್ಷಿಯಣ್ಣ ಅವಕ್ಕೆ ದಾರಿ ಯಾವುದಣ್ಣಾ
ಮೂಕ ಪ್ರಾಣಿಗಳ ಅಳಿವು ಉಳಿವುಗಳ
ಯಾರು ಕೇಳ್ವರಣ್ಣಾ



12. ಮಾಡಿದ್ದುಣ್ಣೊ ಮಾರಾಯ

ಮಾನವ ಓ ನವ ಮಾನವ //ಪ//
ಬರಿ ಸ್ವಾರ್ಥಿಯಾದೆಯಲ್ಲೊ ದಾನವ//

ಕಾಡಿಗೆ ಕೊಡಲಿಯಿಟ್ಟು ಬೋಳು ಮಾಡಿದೆ
ವನದೇವಿಯ ಮೇಲೆ ಅತ್ಯಾಚಾರ ನಡೆಸಿದೆ
ಮೋಡ ಚದುರಿದೆ ಮಳೆಯು ಹಾರಿಹೋಗಿದೆ
ಬರವು ಬಂದಿದೆ ಭುವಿಗೆ ಬರವು ಬಂದಿದೆ
ಮಾಡಿದ್ದುಣ್ಣೊ ಮಾರಾಯ ಗಾದೆ ಮಾತಿದೆ //ಪ//

ಗಂಗೆಯ ಶೀಲ ಕೆಡಿಸಿ ಮಲಿನ ಮಾಡಿದೆ
ಯದ್ಧಸಾರಿ ಗಾಳಿಯಲ್ಲಿ ವಿಷವ ಬೆರಸಿದೆ
ಸದ್ದು ಗದ್ದಲ ದೊಂಬಿ ಮಾಡಿ ಶಾಂತಿ ಕದಡಿದೆ
ರೋಗ ಬಂದಿದೆ ದಾರುಣ ರೋಗ ಬಂದಿದೆ
ಮಾಡಿದ್ದುಣ್ಣೋ ಮಾರಾಯ ಗಾದೆ ಮಾತಿದೆ //ಪ//

ಭೂತಾಯಿ ಎದೆಯ ಕೊರೆದು ಲೂಟಿ ಮಾಡಿದೆ
ಅಚಲಾಚಲ ಹಿಮಾಚಲವು ಕುಸಿಯ ತೊಡಗಿದೆ
ಹೇಯ ಕೃತ್ಯದಿಂದ ಓಜೋನ್ ಕವಚ ಕರಗಿದೆ
ಬೆಂಕಿ ಬರಲಿದೆ ಧರೆಗೆ ಬೆಂಕಿ ಬರಲಿದೆ
ಮಾಡಿದ್ದುಣ್ಣೋ ಮಾರಾಯ ಗಾದೆ ಮಾತಿದೆ //ಪ//

– ಅಬ್ಬಾಸ್ ಅಬ್ಬಲಗೆರೆ

13. ಈ ನೆಲ ಈ ಜಲ

ಈ ನೆಲ ಈ ಜಲ ಈ ಕಾಡು

ಗೀಜಗ ಕಟ್ಟಿದ ಈ ಗೂಡು

ಇರಲಿ ಇರಲಿ ಹೀಗೆ, ಪ್ರಕೃತಿ ಕೊಟ್ಟ ಕೊಡುಗೆ//ಪ//

ಜುಳು ಜುಳು ಹರಿವ ಹೊಳೆಗೆ, ಕೊಳೆಯ ಬೆರೆಸೊ ಖಳರೇ
ಬಗೆ ಬಗೆ ಹೊಗೆಯನು ಉಗುಳಿ ಮಲಿನಗೊಳಿಸದಿರಿ ಗಾಳಿ
ಸಾಕು ಇನ್ನೂ ಸಾಕು, ಈ ತಪ್ಪ ತಿದ್ದಬೇಕು//ಪ//

ಮರಗಳ ಕಡಿದು ಕಡಿದು, ಎಲ್ಲೆಡೆ ಭಣ ಭಣ ಬಿಸಿಲು
ಚಿಲಿ ಪಿಲಿ ಉಲಿವಾ ಹಕ್ಕಿ, ಅಳುತಿದೆ ಬಿಕ್ಕಿ ಬಿಕ್ಕಿ
ಸಾಕು ಇನ್ನು ಸಾಕು ಹಸಿರಾಗಬೇಕು ಬದುಕು//ಪ//

ರಕ್ಷಿಸಬೇಕು ಬಿಡದೆ, ನಮ್ಮ ನೆಲ ಜಲಗಳಾ ನಾವು
ನಾಳಿನ ಪೀಳಿಗೆಗಾಗಿ, ಉಳಿಸಿರಿ ನಾಡಿನ ಚಲುವು
ಕರುನಾಡ ಚಲುವು, ಈ ಸಿರಿನಾಡ ಚಲುವು//ಪ//

–ಹೆಚ್.ಡುಂಡಿರಾಜ್

14. ಬಂದು ನೋಡ್ರಪ್ಪ ನಮ್ ಹಿರೋಶಿಮಾ

ಬಂದು ನೋಡ್ರಪ್ಪ ನಮ್ ಹಿರೋಶಿಮಾ
ಆಗಿ ಹೋಯ್ತಪ್ಪ ಅದು ನೆಲಸಮಾ //ಪ//

ನೊಂದ ನಮ್ಮ ನಾಗಾಸಾಕಿ
ಅಮೇರಿಕದೋರು ಬಾಂಬು ಹಾಕಿ
ಬೆಂದುಹೋದ್ರು ನಮ್ಮ ಜನರು ಬೂದಿಯಾಗಿ
ಲಕ್ಷಾಂತರ ಜನರು ಸಮಾಧಿಯಾಗಿ //ಪ//

ಹುಟ್ಟಿದ ಮಕ್ಕಳ್ಗೆ ಕಾಲೇ ಇಲ್ಲ
ವಿಕಾರ ರೂಪ ಮೈಯಲ್ಲೆಲ್ಲಾ
ಹಸಿರೇ ಹುಟ್ಟೋದಿಲ್ಲವಣ್ಣ ಭೂಮಿಯಲ್ಲಿ
ಬೆಂದುಹೋಯಿತಣ್ಣ ಅದು ಬೆಂಕಿಯಲ್ಲಿ //ಪ//

ಕಣ್ಣಿಗೆ ಕಾಣೋ ಕಾಂತಿಯನ್ನು ಶಾಂತಿಯಿಂದ ಕಾಪಾಡೋಣ
ಎದೆಯ ಕೊಟ್ಟು ನಿಲ್ಲಿರೆಲ್ಲ ಒಂದಾಗಿ
ಯುದ್ಧ ಬೇಡವೆಂದು ಕೂಗಿ ಜೋರಾಗಿ //ಪ//

ಹುಟ್ಟಿ ಬೆಳೆದ ನಾಡಿನಲ್ಲಿ
ಗಟ್ಟಿಯಾಗಿ ಮೆಟ್ಟಿ ನಿಂತು
ವಿಜ್ಞಾನ ವಿಕೃತವ ಅಳಿಸೋಣ/
ಹೊಸ ನಾಡ ಕಟ್ಟಲು ಶ್ರಮಿಸೋಣ //ಪ//

– ಗ್ಯಾರಂಟಿ ರಾಮಣ್ಣ



15. ಬೋಲೋ ಹಂ ಏಕ್ ಹೈ

ಬೋಲೋ ಹಂ ಏಕ್ ಹೈ
ಬೋಲೋ ಹಂ ಏಕ್ ಹೈ //ಪ//

ಉತ್ತರ್ ದಕ್ಷಿಣ್ ರೆಹನೆ ವಾಲೋ
ಬೋಲೋ ಬೋಲೋ ಹಂ ಏಕ್ ಹೈ //ಪ//

ಪುರಬ್ ಪಶ್ಚಿಮ್ ರೆಹನೆ ವಾಲೋ
ಬೋಲೋ ಬೋಲೋ ಹಂ ಏಕ್ ಹೈ //ಪ//

ಕಿಸಾನ್ ಮಜ್ದುರ್ ಮಿಲ್‌ಕರ್ ಬೋಲೊ
ಬೋಲೋ ಬೋಲೋ ಹಂ ಏಕ್ ಹೈ //ಪ//

ಗಾನೆ ವಾಲೊ ಗಾಕರ್ ಬೋಲೊ
ಬೋಲೋ ಬೋಲೋ ಹಂ ಏಕ್ ಹೈ //ಪ//

ಹಿಂದೂ ಬೋಲೊ ಮುಸ್ಲಿಂ ಬೋಲೊ
ಬೋಲೋ ಬೋಲೋ ಹಂ ಏಕ್ ಹೈ //ಪ//

ಸಿಖ್ ಬೋಲೊ ಇಸಾಯಿ ಬೋಲೊ
ಬೋಲೋ ಬೋಲೋ ಹಂ ಏಕ್ ಹೈ //ಪ//

ದೋಸ್ತೊ ಆವೋ ಗಾವೋ ನಾಚೋ
ಬೋಲೋ ಬೋಲೋ ಹಂ ಏಕ್ ಹೈ //ಪ//

– ಸಂಗ್ರಹ



16. ಹಂಚಿ ತಿನ್ನೋಣ

ಹಂಚಿ ತಿನ್ನೋಣ ನಾವು
ಹಂಚಿ ತಿನ್ನೋಣ
ಮಂಚದ ಕಾಲಿನಂತೆ ನಾವು
ಸಮನಾಗಿ ಬಾಳೋಣ

ಎಲ್ಲರೂ ಸೇರೋಣ ಶ್ರಮದಿ
ಸಮನಾಗಿ ದುಡಿಯೋಣ
ದುಡಿತದಿ ಬಂದ ಲಾಭವನೆಲ್ಲ
ಸಮನಾಗಿ ಹಂಚೋಣ
ಒಂದಾಗಿ ಬಾಳೋಣ ನಾವು
ಚೆಂದಾಗಿ ಬಾಳೋಣ
ಸ್ವಾಭಿಮಾನದ ಸರ್ವಸಮತೆಯ
ಸಮಾಜ ಕಟ್ಟೋಣ.

- ನಿಂಗು. ಸೊಲಗಿ



17. ಭೂಮಿ ಹುಟ್ಟಿದ್ದು ಹೇಗೆ?

ಭೂಮಿ ಹುಟ್ಟಿದ್ದು
ಹೇಗೆ? ಹೇಗೆ? ಹೇಗೆ?

ಬಹಳ ಆದಿ ಕಾಲದಲ್ಲಿ
ಮಿಲಿಯ ವರುಷ ಹಿಂದಿನಲ್ಲಿ
ಭೂಮಿಯೆಂಬ ವಸ್ತು ಒಂದು
ಇರಲೆ ಇಲ್ಲ ಇರಲೆ ಇಲ್ಲ
ಹಾಗಾದರೆ, ಭೂಮಿ ಹುಟ್ಟಿದ್ದು
ಹೇಗೆ? ಹೇಗೆ? ಹೇಗೆ?

ಬ್ರಹ್ಮಾಂಡದಲ್ಲೆಲ್ಲ ನೆಬ್ಯುಲವೆಂಬ ಅಗ್ನಿಗೋಳ
ಅನಿಲ ರಾಶಿ ಮುದ್ದೆ ಮುದ್ದೆ
ಕೊತ ಕೊತನೆ ಕುದಿಯುತಿತ್ತು
ಒಂದಕ್ಕೊಂದು ತಾಕಲಾಟ
ಎಡಬಿಡದ ಹೋರಾಟ
ಹು. ಹ. ಹು. ಹ. ಹು. ಹ. ಹು. ಹ.
ಢಮಾರ್................

ನೆಬ್ಯುಲದಿಂದ ತುಂಡೊಂದು
ಸಿಡಿದು ಹೋಗಿ ದೂರ
ದೊಡ್ಡ ತುಂಡು ಸೂರ್ಯನಾಗಿ
ಚಿಕ್ಕ ತುಂಡು ಭೂಮಿಯಾಗಿ
ತನ್ನ ಸುತ್ತ ತಾನೆ ತಿರುಗಿ
ತಣ್ಣಗಾಯಿತು
ಭೂಮಿ ಹುಟ್ಟಿದ್ದು ಹೀಗೆ, ಹೀಗೆ, ಹೀಗೆ.

- ಜೊವಾನ್ ಡಿ.ಸಿಲ್ವ

18. ಚಲನೆಯೆ ಎಲ್ಲೆಲ್ಲು ಅಣ್ಣ

ಚಲನೆಯೆ ಎಲ್ಲೆಲ್ಲು ಅಣ್ಣ
ಈ ಚಲನೆಯೆ ವಿಶ್ವದ ಸತ್ಯ ಕಾಣಣ್ಣ
ಚಲನೆಯೆ ಎಲ್ಲೆಲ್ಲು ಅಣ್ಣ//ಪ//

ಭೂಮಿಯ ಸುತ್ತಾ ಚಂದ್ರ
ತಿರು ತಿರು ತಿರುಗುವನಣ್ಣ
ಹೀಗೆ ತಿರುಗುವುದು ಹೀಗೆ ತಿರುಗುವುದು
ಭೂಮಿಯ ಗುರುತ್ವದಿಂದಣ್ಣ //ಪ//

ಭೂಮಿಯು ತಿರುಗುವುದಣ್ಣಾ
ಸೂರ್ಯನ ಸುತ್ತವಣ್ಣ
ಹೀಗೆ ತಿರುಗುವುದು, ಹೀಗೆ ತಿರುಗುವುದು
ಸೂರ್ಯನ ಗುರುತ್ವದಿಂದಣ್ಣ //ಪ//

ಸೂರ್ಯ ಚಂದಿರನ ನಡುವೆ
ನಮ್ಮ ಭೂಮಿಯು ಅಡ್ಡ ಬಂದಾಗ
ಚಂದಿರನು ಮಾಯವೊ ಅಣ್ಣ
ಅದೆ ಕಾಣೊ ಚಂದ್ರಗ್ರಹಣ//ಪ//

ಸೂರ್ಯ ಭೂಮಿಯ ನಡುವೆ
ನಮ್ಮ ಚಂದಿರ ಅಡ್ಡ ಬಂದಾಗ
ಸೂರ್ಯನ ಮೊಗವು ಕಾಣದೊ ಅಣ್ಣ
ಅದೆ ಕಾಣೊ ಸೂರ್ಯಗ್ರಹಣ

ರಾಹು ನುಂಗಲ್ವೊ ಸೂರ್ಯನ್ನ
ಕೇತು ತಿನ್ನಲ್ವೊ ಚಂದ್ರನ್ನ
ಸೂರ್ಯನ ಹತ್ತಿರ ಹೋದರೆ ಎಲ್ಲಾ
ರಾಹು ಕೇತು ನಾವು ನೀವು
ಎಲ್ಲವೂ ಭಸ್ಮ ಕಾಣಣ್ಣಾ//ಪ//

— ಹಾರೋನಹಳ್ಳಿ ಸ್ವಾಮಿ

19. ಎಲ್ಲಿದೆ ಇನ್ನೆಲ್ಲಿಯ ಸಹನೆ

ಎಲ್ಲಿದೆ ಇನ್ನೆಲ್ಲಿಯ ಸಹನೆ
ವಿಶ್ವದ ಹೆಬ್ಬಾಗಿಲಲಿ ಯುದ್ಧದಾ ಘರ್ಜನೆ
ಎಲ್ಲಿದೆ ಇನ್ನೆಲ್ಲಿಯ ಸಹನೆ //ಪ//

ಮುಕ್ತ ದಿನ ಮುಕ್ತ ಪ್ರಾಣ ಮುಕ್ತ ನಮ್ಮ ಉಸಿರು
ನಾಗರಿಕತೆ ಶತೃಗಳಿಗೆ ನೆತ್ತರಿನಾ ದಾಹವು
ಮಾಡುತಿರುವ ಯುದ್ಧಕೋರ ಯುದ್ಧದಾ ಘೋಷಣೆ//ಪ//

ಬೇಡ ಯುದ್ಧ ಬೇಡ ಯುದ್ಧ ಎತ್ತಿ ಶಾಂತಿಯಾ ಧ್ವಜ
ಒಕ್ಕೊರಲಲಿ ಎತ್ತಿ ಕೂಗಿ ಮತ್ತೆ ಬೇಡ ವಿನಾಶ
ಬೇಡ ಮತ್ತೆ ನಾಗಸಾಕಿ ಮತ್ತೆ ಬೇಡ ಹಿರೋಶಿಮಾ//ಪ//

– *ಸಂಗ್ರಹ*




20. ಕಟ್ಟುತ್ತೇವ ನಾವು

ಕಟ್ಟುತ್ತೇವ ನಾವು ಕಟ್ಟುತ್ತೇವ ನಾವು
ಕಟ್ಟೆ ಕಟ್ಟುತ್ತೇವಾ
ಒಡೆದ ಮನಸುಗಳ ಕಂಡ ಕನಸುಗಳ
ಕಟ್ಟೇ ಕಟ್ಟುತ್ತೇವಾ, ನಾವು ಕನಸ ಕಟ್ಟುತ್ತೇವಾ//ಪ//

ಜಾತಿಯಿಲ್ಲದ ಭೀತಿಯಿಲ್ಲದ ಬಾಳ ಕಟ್ಟುತ್ತೇವಾ
ಕುಲವೆನ್ನದಾ ಮನುಕುಲವ ನಾವು ಕಟ್ಟೇ ಕಟ್ಟುತ್ತೇವಾ
ನಾವು ನಾಡ ಕಟ್ಟುತ್ತೇವಾ//ಪ//

ಗೋಳಿಲ್ಲದಾ ಗುಂಡಿಲ್ಲದಾ ನಾಡಕಟ್ಟುತ್ತೇವಾ
ನೂರು ಮನಸಿನ ಕೋಟಿ ಕನಸಿನ
ನಾಡ ಕಟ್ಟುತ್ತೇವಾ
ನಾವು ನಾಡ ಕಟ್ಟುತ್ತೇವಾ//ಪ//

– *ಸತೀಶ್ ಕುಲಕರ್ಣಿ*



21. ಗೆಲುವು ನಮ್ಮದು


ಗೆಲವು ನಮ್ಮದು, ಗೆಲವು ನಮ್ಮದು
ಇಂದಿಗೂ ಎಂದೆಂದಿಗೂ ಗೆಲವು ನಮ್ಮದು //ಪ//

ಒಂಟಿ ಒಬ್ಬೊಂಟಿ ನಾವಲ್ಲಾ
ಎಂದಿಗೂ ನಾವು ಒಂಟಿ ನಡೆಯುವ
ಪಯಣಿಗರೇ ಅಲ್ಲಾ //ಗೆಲವು//

ಒದುಕಿನುದ್ದಕೂ ಬದ್ಧ ವೈರಿಗಳ
ಗೆದ್ದೇ ಗೆಲ್ಲುವೆವು ! ನಾವು ಗೆದ್ದೇ ಗೆಲ್ಲುವೆವು
ಇದು ನಮ್ಮ ಎದೆಯಾಳದ
ನಿಶ್ಚಲ ನಂಬಿಕೆಯು //ಪ//

ಹೋರಾಟದ ದಾರಿಯು
ನಮ್ಮನು ಬಿಡುಗಡೆ ಮಾಡುವುದು
ನಿಮ್ಮನು ಬಿಡುಗಡೆ ಮಾಡುವುದು
ಎಲ್ಲರ ಬಿಡುಗಡೆ ಮಾಡುವುದು
ಇದು ನಮ್ಮ ಎದೆಯಾಳದ
ನಿಶ್ಚಲ ನಂಬಿಕೆಯು //ಪ//

– ಸಮೂಹ ಸೃಷ್ಠಿ



ಭಾರತ ಜ್ಞಾನ ವಿಜ್ಞಾನ ಸಮಿತಿಯ ಉದ್ದೇಶಗಳು

೧. ಸಂಪೂರ್ಣಸಾಕ್ಷರತೆ, ಸಾಕ್ಷರೋತ್ತರ ಕಾರ್ಯಕ್ರಮ ಹಾಗೂ ಮುಂದುವರಿಕೆ ಶಿಕ್ಷಣಕ್ಕೆ ಜನ ಬೆಂಬಲ ಒದಗಿಸಿ ಯಶಸ್ವಿ ಮಾಡುವುದು. ಕೆಲವು ಆಯ್ದ ಪ್ರದೇಶಗಳಲ್ಲಿ ಮುಂದುವರಿಕೆ ಶಿಕ್ಷಣ ಕೇಂದ್ರಗಳನ್ನು ತೆಗೆದುಕೊಂಡು ನಡೆಸುವುದು.

೨. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಸಂತಸ ಕಲಿಕೆಯ ಚಿಣ್ಣರ ಮೇಳಗಳು ಹಾಗೂ ಇತರ ಪೂರಕ ಕಾರ್ಯಕ್ರಮಗಳನ್ನು ಸಂಘಟಿಸುವುದು, ಶಿಕ್ಷಕರ ತರಬೇತಿ ಹಮ್ಮಿಕೊಳ್ಳುವುದು.

೩. ಮಹಿಳಾ ಸಮಾನತೆಗೆ ಪೂರಕವಾದ ಸಮತಾ ವಿಜ್ಞಾನ ಮೇಳಗಳನ್ನು ಸಂಘಟಿಸುವುದು ಹಾಗೂ ಸ್ವಸಹಾಯ ಸಂಘಗಳನ್ನು ರಚಿಸಿ ನಡೆಸುವುದು.

೪. ಮೂಢನಂಬಿಕೆ ವಿರೋಧಿಸುವ ಹಾಗೂ ವೈಜ್ಞಾನಿಕ ಮನೋಭಾವನೆ ಬೆಳೆಸುವ ಕಾರ್ಯಕ್ರಮ/ಕಾರ್ಯಾಗಾರ ಹಾಗೂ ಜಾಥಾಗಳನ್ನು ಹಮ್ಮಿಕೊಳ್ಳುವುದು.

೫. ಕಡಿಮೆ ಬೆಲೆಯಲ್ಲಿ ಶಿಕ್ಷಣ, ವಿಜ್ಞಾನ ಹಾಗೂ ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸಿ ಮಾರಾಟ ಮಾಡುವುದು. ಜನಸಾಮಾನ್ಯರಲ್ಲಿ ಓದುವ ಹವ್ಯಾಸ ಬೆಳೆಸುವುದು.

೬. ಜಿಲ್ಲಾ, ತಾಲೂಕು, ಹಾಗೂ ಸ್ಥಳೀಯ ಮಟ್ಟದಲ್ಲಿ ಸದಸ್ಯರನ್ನು ನೊಂದಾಯಿಸಿ ಜ್ಞಾನ ವಿಜ್ಞಾನ ಕೇಂದ್ರಗಳನ್ನು ಆರಂಭಿಸುವುದು.

೭. ಜನಪರ ವಿಜ್ಞಾನ ಹಾಗೂ ತಂತ್ರಜ್ಞಾನ ಯೋಜನೆಗಳಿಗಾಗಿ ಒತ್ತಾಯಿಸುವುದು.

೮. ರಜಾ ದಿನಗಳಲ್ಲಿ ಮಕ್ಕಳಿಗಾಗಿ ವಿಜ್ಞಾನ ಶಿಬಿರಗಳನ್ನು ಏರ್ಪಡಿಸುವುದು.

೯. ಗ್ರಾಮೀಣಾಭಿವೃದ್ಧಿಯ ಕೆಲಸಗಳನ್ನು ಕೈಗೆತ್ತಿಕೊಳ್ಳುವುದು.



ನಾನು ಭಾರತದ ಭವಿಷ್ಯವನ್ನು ನೋಡುವಾ
ನಕ್ಷತ್ರ, ಗ್ರಹಗಳನ್ನು ನೋಡುವುದಿ
ಮುದ್ದು ಮಕ್ಕಳ ಹೊಳೆಯುವ ಕಣ್ಣುಗಳನ್ನು ನೋಡುತ್ತೇ
ಆ ಕಣ್ಣುಗಳಲ್ಲಿ ಪ್ರಕಾಶವಿದ್ದರೆ, ಉಲ್ಲಾಸವಿದ್ದ
ನಮ್ಮದೇಶದ ಭವಿಷ್ಯ ಉಜ್ವಲವಾಗಿರುತ್ತ
ಆ ಕಣ್ಣುಗಳಲ್ಲಿ ಕಣ್ಣೀರು, ನಿರಾಸೆ ತುಂಬಿದ್ದ
ಭಾರತಕ್ಕೆ ಭವಿಷ್ಯವಿರುವುದಿ

